## ನಿಮ್ಮೊಡನೆ

# ಮೂಢನಂಬಿಕೆಗೆ ಕೊನೆಯೆಂದು?

ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಲವು ಮೌಢ್ಯಾಚರಣೆಗಳಿಗೂ, ಈ ಹಿಂದುಳಿದಿರುವಿಕೆಗೂ ಪರಸ್ಪರ ಸಂಬಂಧವಿದೆ. ಇಂತಹ ಅಮಾನವೀಯ ಘಟನೆಗಳನ್ನು ಮುಸ್ಲಿಂ ಧರ್ಮದೊಳಗೇ ಇರುವ ಬುದ್ಧಿಜೀವಿಗಳು, ಮುಖಂಡರು ಗಟ್ಟಿ ಧ್ವನಿಯಲ್ಲಿ ಏಕೆ ಖಂಡಿಸುವುದಿಲ್ಲ?

'ನಂಬಿಕೆ ತಪ್ಪಲ್ಲ; ಆದರೆ ಮೂಢ ನಂಬಿಕೆ ಮಹಾಪಾಪ' ಎನ್ನುವುದು ಜನರಿಗೆ ಅರ್ಥವಾಗಲು ಇನ್ನೆಷ್ಟು ಸಮಾಜ ಸುಧಾರಕರು ಹುಟ್ಟಿ ಬರಬೇಕೋ ಗೊತ್ತಿಲ್ಲ. ವಿಜ್ಞಾನ ಎಷ್ಟೇ ಮುಂದುವರಿದಿದ್ದರೂ ಮೂಢನಂಬಿಕೆಗಳನ್ನು ಪೋಷಿಸಿಕೊಂಡು ಬರುವ ಜನರ ಸಂಖ್ಯೆ ಕಡಿಮೆಯಾಗಿಲ್ಲ. ಗುಲ್ಬರ್ಗ ತಾಲ್ಲೂಕಿನ ಫಿರೋಜಾಬಾದ್‌ನಲ್ಲಿ ನಿಧಿಯ ಆಸೆಗಾಗಿ ಒಂದೂವರೆ ವರ್ಷದ ತನ್ನ ಹೆಣ್ಣುಮಗುವನ್ನೇ ಮಸೀದಿಯ ಧರ್ಮ ಗುರುವೊಬ್ಬ ಬಲಿಕೊಟ್ಟ ಘಟನೆ ನಡೆದಿದೆ. ಕೋಟೆಯಲ್ಲಿ ಇದೆ ಎನ್ನಲಾದ ನಿಧಿಯ ವಶಕ್ಕಾಗಿ ತನ್ನ ಆರು ಮಂದಿ ಗೆಳೆಯರ ಜತೆ ಸೇರಿ ಎಳೆಯ ಹಸುಳೆಯ ತಲೆ ಕಡಿದಿರುವ ಘಟನೆ ಇಡೀ ಊರಲ್ಲಿ ಆತಂಕ ಹುಟ್ಟಿಸಿದೆ. ಜನರ ಪ್ರಕಾರ, ಇದು ಬಿಡಿ ಘಟನೆಯಲ್ಲ, ಈ ಹಿಂದೆಯೂ ಇಂತಹ ಘಟನೆಗಳು ನಡೆದಿವೆ. ಈ ಘಟನೆಯ ಬಳಿಕ ಹೆತ್ತವರು ತಮ್ಮ ಪುಟ್ಟ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುವುದನ್ನೂ ನಿಲ್ಲಿಸಿದ್ದಾರೆ ಎನ್ನುವುದು ಪರಿಸ್ಥಿತಿಯ ವಿಷಣ್ಣತೆಗೆ ಸಾಕ್ಷಿ.

ರಾಮನಗರದಲ್ಲಿ ಇದೇ ರೀತಿಯ ಇನ್ನೊಂದು ಘಟನೆ ನಡೆದಿದೆ. ತರುಣಿಯೊಬ್ಬಳ ದೈಹಿಕ ಕಾಯಿಲೆಯನ್ನು ಗುಣಪಡಿಸುತ್ತೇನೆಂದು ಹೇಳಿ ಮಂತ್ರವಾದಿಯೊಬ್ಬ ಆಕೆಯ ಮರ್ಮಾಂಗಕ್ಕೆ ಪ್ಲಾಸ್ಟಿಕ್ ಪೈಪ್ ತುರುಕಿ ಅದರ ಮೂಲಕ ಮಂತ್ರದ ನೀರು ಮತ್ತು ಬೂದಿ ಸುರುವಿದ ಬರ್ಬರ ಘಟನೆಯದು. ಪಕ್ಕದ ಬೆಂಗಳೂರಿನಲ್ಲಿ ಜಗತ್ತಿನ ಅತ್ಯುತ್ತಮ ವೈದ್ಯರು ಇರುವಾಗ ಕಾಯಿಲೆಯ ಚಿಕಿತ್ಸೆಗೆ ಮಂತ್ರವಾದಿಯ ಬಳಿ ಕರೆದೊಯ್ಯುವ ಪೋಷಕರ ಮೂಢತೆಯಷ್ಟೇ, ಈ ಮಂತ್ರವಾದಿಯ ಚಿಕಿತ್ಸಾ ವಿಧಾನವೂ ಕ್ರೂರವಾದದ್ದು. ಮರ್ಮಾಂಗಕ್ಕೆ ಪ್ಲಾಸ್ಟಿಕ್ ಪೈಪ್ ತೂರಿಸಿ ಬೂದಿ ಹಾಕಿದರೆ ಕಾಯಿಲೆ ಗುಣವಾಗುತ್ತದೆ ಎಂದು ನಂಬಿರುವ ಈ ಮಂತ್ರವಾದಿಗೇ ತುರ್ತು ಮಾನಸಿಕ ಚಿಕಿತ್ಸೆ ನೀಡುವ ಅಗತ್ಯವಿದೆ. ಈತ ತನ್ನ ಚಿಕಿತ್ಸಾ ಸ್ಥಳದಲ್ಲೇ ಪ್ರಾರ್ಥನಾಲಯ ರೂಪಿಸಿ ಧರ್ಮದ ಮೇಲೆ ಜನರಿಗೆ ಇರುವ ನಂಬಿಕೆಯನ್ನೇ ಮೂಢ ನಂಬಿಕೆಯನ್ನಾಗಿಸಿ ವಂಚಿಸಲು ಹೊರಟಿರುವುದು ಸ್ಪಷ್ಟ.

ಮೊದಲ ಪ್ರಕರಣದಲ್ಲಿ ನಿಧಿಗಾಗಿ ಸ್ವಂತ ಮಗುವಿನ ಕತ್ತು ಕತ್ತರಿಸಿದ ವ್ಯಕ್ತಿ, ಊರಿನ ಜನರಿಗೆ ಪ್ರತಿದಿನ ಐದು ಹೊತ್ತು ನಮಾಜ್ ಮಾಡಿಸಿ ಧರ್ಮದ ಒಳಿತುಗಳನ್ನು ಬೋಧಿಸುತ್ತಿದ್ದ! ಸ್ವತಃ ತಾನೇ ಮೂಢನಂಬಿಕೆಗೆ ಬಲಿಯಾಗಿರುವ ಈ ಮೌಲ್ವಿ, ಊರಿನ ಜನರಿಗೆ ಎಂತಹ ಧರ್ಮಬೋಧನೆ ಮಾಡುತ್ತಿದ್ದ ಎನ್ನುವುದು ಯೋಚಿಸಬೇಕಾದ ವಿಷಯ. ಎರಡನೆಯ ಪ್ರಕರಣದಲ್ಲಿ ಆರೋಪಿಯನ್ನು ರಕ್ಷಿಸಲು ಆ ಧರ್ಮದ ಕೆಲವು ಮುಖಂಡರು ಯತ್ನಿಸಿದ್ದಾಗಿ ವರದಿಯಾಗಿದೆ. ಜನ ಮೌಢ್ಯವನ್ನು ಅಪ್ಪಿಕೊಂಡಾಗ ಎಷ್ಟು ಕ್ರೂರವಾಗಿ ಮತ್ತು ಅಮಾನವೀಯವಾಗಿ ವರ್ತಿಸುತ್ತಾರೆ ಎನ್ನುವುದಕ್ಕೆ ಎರಡೂ ಘಟನೆಗಳು ಸಾಕ್ಷಿ. ಹೆಣ್ಣು ಮಕ್ಕಳನ್ನು ಹುಟ್ಟಿದಾಕ್ಷಣ ಹೂಳುವ ಅಮಾನವೀಯ ಪದ್ಧತಿಯ ವಿರುದ್ಧ ಮಹಮ್ಮದ್ ಪೈಗಂಬರರೇ ತಮ್ಮ ಜೀವಿತದ ಕಾಲದಲ್ಲಿ ಗಟ್ಟಿ ಧ್ವನಿ ಎತ್ತಿದವರು. ಅದೇ ಪ್ರವಾದಿಯ ಧರ್ಮವನ್ನು ಪ್ರಚಾರ ಮಾಡುವ ಧರ್ಮಗುರುವೊಬ್ಬ ನಿಧಿಯ ಆಸೆಗಾಗಿ ಹೆಣ್ಣುಮಗುವಿನ ಕತ್ತು ಕತ್ತರಿಸಿರುವುದು ಮನುಷ್ಯರೆಲ್ಲರೂ ತಲೆ ತಗ್ಗಿಸಬೇಕಾದ ಘಟನೆ.

ಮುಸ್ಲಿಂ ಸಮುದಾಯ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹಲವು ಮೌಢ್ಯಾಚರಣೆಗಳಿಗೂ, ಈ ಹಿಂದುಳಿದಿರುವಿಕೆಗೂ ಪರಸ್ಪರ ಸಂಬಂಧವಿದೆ. ಇಂತಹ ಅಮಾನವೀಯ ಘಟನೆಗಳನ್ನು ಮುಸ್ಲಿಂ ಧರ್ಮದೊಳಗೇ ಇರುವ ಬುದ್ಧಿಜೀವಿಗಳು, ಮುಖಂಡರು ಗಟ್ಟಿ ಧ್ವನಿಯಲ್ಲಿ ಏಕೆ ಖಂಡಿಸುವುದಿಲ್ಲ? ಆರೋಪಿ ಧರ್ಮಗುರು ಎಂಬ ಕಾರಣಕ್ಕಾಗಿ ಆತನನ್ನು ರಕ್ಷಿಸುವ ಪ್ರಯತ್ನವನ್ನು ಏಕೆ ಮಾಡುತ್ತಾರೆ? ಧರ್ಮ ಯಾವತ್ತೂ ಇಂತಹ ಅಮಾನವೀಯತೆಯನ್ನು ಬೋಧಿಸುವುದಿಲ್ಲ. ಆದರೆ ಧರ್ಮದ ಗುತ್ತಿಗೆ ಹಿಡಿದಿರುವವರು ಇಂತಹ ಮೂಢನಂಬಿಕೆಗಳನ್ನು ಪೋಷಿಸುತ್ತಿದ್ದಾರೆ. ಸಮುದಾಯದ ಹಿಂದುಳಿದಿರುವಿಕೆಗೆ ಸದಾ ಬೇರೆಯವರನ್ನು ದೂರುವ ಬದಲು, ಮೂಢನಂಬಿಕೆಗಳನ್ನು ಹೋಗಲಾಡಿಸಲು ಸಮುದಾಯದ ಬುದ್ಧಿಜೀವಿಗಳು ಮತ್ತು ಯುವಜನರು ಮುಂದೆ ಬರಬೇಕು.

ಸಮಾಜ ಕಲ್ಯಾಣ ಇಲಾಖೆ ಇಂತಹ ಘಟನೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಏಕೆ ವಿಶೇಷ ಪ್ರಚಾರಾಂದೋಲನ ನಡೆಸುತ್ತಿಲ್ಲ? ಒಂದೆಡೆ ದೃಶ್ಯಮಾಧ್ಯಮಗಳಲ್ಲಿ ಮೂಢನಂಬಿಕೆಯನ್ನು ಪೋಷಿಸುವ ಕಾರ್ಯಕ್ರಮಗಳ ಪ್ರಸಾರ ಎಗ್ಗಿಲ್ಲದೆ ನಡೆಯುತ್ತಿವೆ. ಇನ್ನೊಂದೆಡೆ ಜನರ ಮೂಢನಂಬಿಕೆಗಳನ್ನು ಹೋಗಲಾಡಿಸುವ ಕೆಲಸ ತನ್ನದಲ್ಲವೇ ಅಲ್ಲ ಎಂಬಂತೆ ರಾಜ್ಯದ ವಿಜ್ಞಾನ-ತಂತ್ರಜ್ಞಾನ ಇಲಾಖೆ ನಿದ್ದೆ ಮಾಡುತ್ತಿದೆ. ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ವಿಶೇಷ ಗಮನ ಹರಿಸಿ, ತುರ್ತು ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಿದೆ.

■ ಬಿ.ಎಂ.ಹನೀಫ್

